(ಇಂದು ದಿನಾಂಕಃ 06-01-2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**<u>ಪಾಟೀ ಸವಾಲು ಶ್ರೀ ವಿ.ಎನ್.ಎಮ್ ವಕೀಲರಿಂದಃ</u>**

ನಾನು ಶಾಲೆ ಕಲಿತಿಲ್ಲ. ನನಗೆ ಗಾಡಿ ನಂಬರ ಮೊಬೈಲ ನಂಬರ ಹೇಳಲು ಬರುತ್ತದೆ. ನನಗೆ ಈಗ 40 ವರ್ಷ ಎಂದರೆ ಸಾಕ್ಷಿ 33 ವರ್ಷ ಎಂದು ಹೇಳುತ್ತಾರೆ. ನನಗೆ ಈಗ 33 ವರ್ಷ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತದ ಸಮಯದಲ್ಲಿ ಕೂಲಿ ಕೆಲಸ ಮಾಡುತ್ತಿದ್ದು ತಿಂಗಳಿಗೆ 15 ಸಾವಿರ ಗಳಿಸೂತ್ತಿದ್ದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನಡೆದ ದಿವಸ ನಾನು ನನ್ನ ದ್ವಿಚಕ್ರವಾಹನದ ಮೇಲೆ ಹೊಗುತ್ತಿದ್ದೆ. ನನ್ನ ಚಾಲನಾ ಪರವಾನಿಗೆ ಇತ್ತು, ಅಪಘಾತವಾದ ಸಮಯದಲ್ಲಿ ಅದು ಕಳೆದುಹೊಗಿರುತ್ತದೆ. ಯಾವ ಆರ್.ಟಿ.ಓ. ಕಚೇರಿಯಿಂದ ನಾನು ಚಾಲನಾ ಪರವಾನಿಗೆ ಪಡೆದಿದ್ದೆ ನನಗೆ ನೆನಪಿಲ್ಲ. ನನ್ನ ಹತ್ತಿರ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪನ್ನು ಮುಚ್ಚಿಡಲು, ನನ್ನ ಹತ್ತಿರ ಚಾಲನಾ ಪರವಾನಿಗೆ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ಪೊಲೀಸರಿಗೆ ದೂರನ್ನು ನಾನೇ ಕೊಟ್ಟಿರುತ್ತೇನೆ. ಅಪಘಾತ ಪಡಿಸಿದ ಆಟೋ ಚಾಲಕನ ಹೆಸರನ್ನು ದೂರಿನಲ್ಲಿ ಬರೆಸಿಲ್ಲ

ಎಂದರೆ ನನಗೆ ಗೊತ್ತಿಲ್ಲ. ನನ್ನ ಗಾಡಿ ಮೇಲೆ ನಾನ್ನೊಬ್ಬನೆ ಹೊಗುತ್ತಿದೆ. ಆಟೋ ಚಾಲಕನ ತಪ್ಪಿನಿಂದ ನನಗೆ ಅಪಘಾತ ಆಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾಹನ ನಡೆಸಲು ಬರುವುದಿಲ್ಲ, ನನ್ನ ಹತ್ತಿರ ಚಾಲನಾ ಪರವಾನಿಗೆ ಇಲ್ಲ, ಆದ್ದರಿಂದ ನನ್ನ ತಿಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ತಿಪ್ಪಿನಿಂದ ಅಪಘಾತ ಆಗಿದ್ದರು ಸಹ ಖಾಜಾಪಟೇಲ ಎಂಬುವವರ ಹೆಸರನ್ನು ಉಪಯೋಗಿಸಿಕೊಂಡು ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ಪೊಲೀಸರು ಸೇರಿಕೊಂಡು ಆಟೊವನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಕಂಪನಿಯವರು ನನ್ನನ್ನು ಬೇಟಿಯಾಗಿದ್ದರು ನಾನು ಕಂಪನಿಯವರಿಗೆ ನನ್ನ ಆಧಾರ ಕಾರ್ಡ, ಪಡಿತರ ಚೀಟಿಯನ್ನು ಕೊಟ್ಟಿರುತ್ತೇನೆ. ಕಂಪನಿಯವರು ನನ್ನ ಹೇಳಿಕೆ ಪಡೆದು ಅದನ್ನು ಚಿತ್ರಿಕರಣ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಹೇಳಿಕೆಯನ್ನು ಆ ದಿನ ಖಾಜಾಪಟೇಲ ಆಟೊ ಚಾಲನೆ ಮಾಡುತ್ತಿರಲಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತ ಆದ ನಂತರ ನಾನು ಮೊದಲು ಸರ್ಕಾರಿ ಆಸ್ಪತ್ರೆಗೆ ಹೊಗಿರುತ್ತೇನೆ. ಒಂದು ರಾತ್ರಿ ಆಸ್ಪತ್ರೆಯಲ್ಲಿ ಇದ್ದಿರುತ್ತೇನೆ. ಆ ನಂತರ ಕಲಬುರಗಿಯ ಸರ್ಕಾರಿ ಆಸ್ಪತ್ರೆಗೆ ಹೊಗಿರುತ್ತೇನೆ. ಈ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆಟೋ ಚಾಲಕನ ತಪ್ಪಿನಿಂದ ಅಪಘಾತ ಆಗಿ ನನಗೆ

ಗಾಯಗಳಾಗಿರುತ್ತವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯ ಚಿಕಿತ್ಸೆಗೆಗಾಗಿ ಎರಡುವರೆ ಲಕ್ಷ ಹಣ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಆದ ಗಾಯಗಳಿಂದ ನನಗೆ ಶಾಶ್ವತ ಅಂಗನ್ಯೂನತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಅಂಗನ್ಯೂನತೆ ಪ್ರಮಾಣ ಪತ್ರದಲ್ಲಿ ವೈದ್ಯರ ಬಳಿ ಕೇಳಿಕೊಂಡು ಹೆಚ್ಚಿನ ಶೇಕಡ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಆಟೊ ವಾಹನದ ಮಾಲಿಕರು ಯಾರು ಎಂದು ನನಗೆ ಗೊತ್ತಿಲ್ಲ. ಆಟೋ ಮಾಲಿಕರು ಬಾಗಲಕೊಟದಲ್ಲಿ ಇರುತ್ತಾರೆ ಎಂದರೆ ಸರಿ. ಆಟೋ ಬಾಗಲಕೊಟೆಯಲ್ಲಿ ನೊಂದಣಿಯಾಗಿದೆ ಎಂದರೆ ಸರಿ. ಸದರಿ ಆಟೋ ಬಾಗಲಕೊಟೆಯಲ್ಲಿ ನೊಂದಣಿಯಾಗಿದೆ ಪರಮಿಟ ಕೂಡ ಬಾಗಲಕೊಟೆದಾಗಿದ್ದು ಆಟೋವನ್ನು ಚಿಂಚೊಳಿಯಲ್ಲಿ ನಡೆಸಿದರೆ ಪರಮಿಟ ಉಲ್ಲಂಗನೆಯಾಗುತ್ತದೆ ಎಂದರೆ ಸಾಕ್ಷಿ ಆಟೋ ಚಿಂಚೋಳಿಯದು ಇರುತ್ತದೆ ಎಂದು ಹೇಳುತ್ತಾರೆ. ಆಟೋ ಚಾಲಕನ ಹತ್ತಿರ ಚಾಲನಾ ಪರವಾನಿಗೆ ಇರಲ್ಲಿಲ್ಲ ಎಂದರೆ ಸರಿಯಲ್ಲ. ನಾನು ಕೇಳುತ್ತಿರು ಪರಿಹಾರದ ಹಣಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ಆಟೋ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಆದ್ದರಿಂದ ವಿಮೆ ಕಂಪನಿಯವರು ಪರಿಹಾರದ ಹಣ ಕೊಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವ್ಯಕ್ತಿ ಬೇರೆಯಾಗಿದ್ದರು ಸಹ ಖಾಜಾಪಟೇಲರವನ್ನು ಈ ಪ್ರಕರಣದಲ್ಲಿ ಸಲ್ಲಿಸಿ ನಾನು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಪರಮಿಟ

ಉಲ್ಲಂಗನೆಯಾಗಿದ್ದರಿಂದ ವಿಮೆ ಕಂಪನಿಯವರು ಪರಿಹಾರದ ಹಣ ಕೊಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.